

# ಅನಾವರಣ

**‘ಮಯೂರ’ದ 50 ವರ್ಷಗಳ ಸುದೀರ್ಘ ಪಯಣದಲ್ಲಿ ಕನ್ನಡದ ಸಿದ್ಧಪ್ರಸಿದ್ಧರು ಜೊತೆಯಾಗಿದ್ದಾರೆ. ಈ ನವಿಲಿನ ನಡಿಗೆಯಲ್ಲಿ ಕಂಡ ಮೋಹಕ ‘ನವಿಲುಗರಿ’ಗಳನ್ನು ಒಂದೊಂದಾಗಿ ಆಯ್ದು ಈ ಅಂಕಣ ಓದುಗರ ಮುಂದಿಡುತ್ತದೆ. 1988ರ ಫೆಬ್ರುವರಿ ಸಂಚಿಕೆಯಿಂದ**

## ಆಯ್ದ ಕತೆ ಇಲ್ಲಿದೆ

ಚಿತ್ರ: ಮನೋಹರ ಆಚಾರ್ಯ

“ಹಲೋ... ಸ್ವೀಟಿ... ಗುಡ್ ಮಾರ್ನಿಂಗ್...” ಡಾಕ್ಟರ್ ವಿಜಯಾ ಪ್ರೊಫೆಸರ್‌ಗೆ ವಿಶ್ ಮಾಡಿದಳು. ಆತ್ಮ ವಿಶ್ವಾಸದ, ಧೈರ್ಯ... ಆಸೆ ಭರವಸೆ ಹುಟ್ಟಿಸುವ ಪುಟ್ಟ ತೀಕ್ಷ್ಣವಾದ ಕಣ್ಣುಗಳ, ಸ್ವಲ್ಪವೇ ಸ್ಥೂಲಕಾಯದ ಎತ್ತರದ ನಿಲುವಿನ ಮಧ್ಯ ವಯಸ್ಸು ದಾಟಿದ ಪ್ರೊಫೆಸರ್ ರಾವ್ ಅವರನ್ನು ಅಭಿಮಾನದಿಂದ ನೋಡಿದ ಮಾನಸ ಸರೋವರದಲ್ಲಿ ಎದ್ದ ಅಲೆಗಳನ್ನು ಬಹು ಸುಲಭದಲ್ಲಿ ತಡೆದು ಹಿಡಿದು ತುಮುಲ, ತಳಮಳ ನಿಲ್ಲಿಸುವ ರಾವ್ ಅವರನ್ನು ಮೊದಲ ಬಾರಿಗೆ ಎಂಬಂತೆ ನೋಡಿದಳು.

ಅವಳ ಕಣ್ಣುಗಳಲ್ಲಿ ಮೂಡಿದ ಮೆಚ್ಚುಗೆಯನ್ನು ಗಮನಿಸಿದ ರಾವ್,

“ಏನ್ ಸ್ವೀಟಿ... ಯಾವುದೋ, ಯಾರದ್ದೋ ಲೋಕದಲ್ಲಿ ಮುಳುಗಿದ ಹಾಗಿದೆ...”

ವಿಜಯಾಳ ಮುಖ ಕೆಂಪೇರಿತು.

“ಯಾರದ್ದೂ ಕನಸಲ್ಲ ನನ್ನ ಪ್ರೀತಿಯ ತಾತ... ನಿಮ್ಮನ್ನೇ ಕುರಿತು ಯೋಚಿಸುತ್ತಿದ್ದೆ...” ಎಂದಳು ಕೊಂಕು ತುಟಿ ಮಾಡಿ.

“ಅಬ್ಬಾ! ಎಷ್ಟು ಸೊಕ್ಕು ನಿಂಗೆ! ನಿನ್ನನ್ನೇ ಮದ್ವೇ ಆಗ್ಬೇಕೂಂತ ನಿಮ್ಮಪ್ಪನ್ನ ದಿನಾ ಕೇಳ್ತಾ ಇದ್ದೀನಿ... ನಂಗೆ ತಾತ ಅಂತೀಯಾ? ಆಂ?...” ಮಾತನಾಡುತ್ತಾ ವಿಜಯಾಳೊಂದಿಗೆ ವಾರ್ಡಿನತ್ತ ಹೆಜ್ಜೆ ಹಾಕಿದರು.

“ನೀವ್ಯಾಕೆ ಸ್ವೀಟಿ ಅನ್ಬೇಕು?... ನಿಮ್ಮನ್ನ ನಾನು ಮದ್ವೆಯಾಗೋದಾ? ಅಬ್ಬಬ್ಬಾ! ಈ ವಿಚಿತ್ರ ‘ಐಡಿಯಾ’ ಬಂದದ್ದಾದರೂ ಹೇಗೆ? ಏನೇ ಇರಲಿ ಇರೋದು ಹುಚ್ಚಾಸ್ಪತ್ರೇಲಿ ತಾನೇ?”